ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 159-163
©*IIMRD*, Mysuru
www.iimrd.com

# ಬಿಳಿಗಿರಿ ರಂಗನಾಥಸ್ವಾಮಿ ಮತ್ತು ದಾಸ ಪರಂಪರೆ: ಜಾನಪದೀಯ ಅಧ್ಯಯನ

**ಮಹದೇವಸ್ವಾಮಿ.ಪಿ[1] ಮತ್ತು ಡಾ. ಟಿ.ಕೆ.ಕೆಂಪೇಗೌಡ[2]**

## ಪೀಠಿಕೆ

ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಬಿಳಿಗಿರಿ ರಂಗನಾಥನ ದಾಸಯ್ಯನವರ ಪರಂಪರೆಯು ನಾಡಿನ ಇತಿಹಾಸವನ್ನು ದೃಢಪಡಿಸುತ್ತದೆ.[1] ಈ ನಾಡಿನ ಸಾಂಸ್ಕೃತಿಕ ಪರಿಸರವನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಪ್ರದಾಯಗಳು ತುಂಬಾ ಮಹತ್ವದ ಪ್ರಾತವಹಿಸುತ್ತವೆ. ಸಂಪ್ರದಾಯಗಳಿಗೆ ಸಮಾಜವನ್ನು ನಿಯಂತ್ರಿಸುವ ಮತ್ತು ಅದನ್ನು ನಿಯಮಿತ ವರ್ಗದಲ್ಲಿ ಕೊಂಡೊಯ್ಯುವ ಶಕ್ತಿ ಇದೆ. ಒಂದು ಭಾಷಾ ಸಮುದಾಯದ ಸಂಸ್ಕೃತಿಯನ್ನು, ಭಾವನೆಗಳ ಏರಿಳಿತಗಳನ್ನು ಅರಿತುಕೊಳ್ಳಲು ಅವು ನೆರವಾಗುತ್ತವೆ. ಈ ಹಿನ್ನಲೆಯಲ್ಲಿ ಯಳಂದೂರು ತಾಲೂಕು ಬಿಳಿಗಿರಿರಂಗನ ಬೆಟ್ಟದ ದಾಸಪ್ಪನವರ ಹಿನ್ನಲೆಯನ್ನು ಪ್ರಸುತ್ತ ಪಡಿಸಲಾಗಿರುತ್ತದೆ. ದಾಸಯ್ಯ ಸಂಪ್ರದಾಯ ವೈಷ್ಣವ ಧರ್ಮ ಮತ್ತು ವೆಂಕಟರಮಣನನ್ನು ಪ್ರಚಾರ ಮಾಡಲು ಹುಟ್ಟುಕೊಂಡಿತ್ತು.

ದಾಸಪ್ಪ ಎಂದರೆ ತಿರುಪತಿ ತಿಮ್ಮಪ್ಪನ ಬಂಟ, ಅಷ್ಟು ದೂರದ ತಿರುಪತಿ ದೇವರಿಗೂ ನಮ್ಮ ಜನರಿಗೂ ಹೇಗೆ ನಂಟು ಬೆಳೆಯಿತು ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ಈ ಭಾಗದ ಹಿನ್ನಲೆಯನ್ನು ನೋಡಬೇಕಾಗುತ್ತದೆ. ಅ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಸಮಗ್ರ ಆಚರಣೆಗಳನ್ನು ಹಾಡುಗಳನ್ನು ಕಲೆ ಹಾಕಿ ವಿವೇಕದಿಂದ ದಾಸಯ್ಯನವರ ಅಧ್ಯಯನ ಕುರಿತು ನೋಡಬೇಕಾಗಿದೆ.[2]

## ಬಿಳಿಗಿರಿರಂಗಯ್ಯ ಸೋಲಿಗರ ಆರಾಧ್ಯ ದೈವನಾದ ಪ್ರಸಂಗ

ಮಲೆಮಾದೇಶ್ವರ ಬೆಟ್ಟದಿಂದ ಸುಮಾರು ದೂರದಲ್ಲಿರುವ ಮತ್ತೊಂದು ನಿಸರ್ಗ ಪರ್ವತವೆಂದರೆ ಬಿಳಿಗಿರಿರಂಗನ ಬೆಟ್ಟ. ಸೋಲಿಗರು ಹೆಚ್ಚಾಗಿ ವಾಸಿಸುವ ಪ್ರದೇಶ. ಮೂಲದಲ್ಲಿ ಮಾತೃವಿನ ಮತ್ತು ಶಿವನ ಆರಾಧಕರಾಗಿದ್ದ ಇವರು ಶ್ರೀವೈಷ್ಣವ ಪರಂಪರೆಯ ಬಿಳಿಗಿರಿರಂಗಯ್ಯನಿಗೆ ಹೇಗೆ ಮತ್ತು ಯಾವಾಗ ಭಕ್ತರಾದರು ಎಂಬುದು ಅತ್ಯಂತ ಕುತೂಹಲಕಾರಿ ವಿಚಾರ. ಅದಕ್ಕೂ ಸೋಲಿಗರು ಪುಟ್ಟ ಕಥೆಯನ್ನು ಹೇಳುತ್ತಾರೆ. ಜೊತಗೆ ಕಥೆಯನ್ನು ಸುದೀರ್ಘ ಕಾವ್ಯವನ್ನಾಗಿಯೂ ಹಾಡುತ್ತಾರೆ.

ಸೋಲಿಗರು ಮತ್ತೊಬ್ಬಳು ಚಲುವೆ ಕುಸುಮಾಲೆ ಕಾಡಿನ ನಡುವಿನ ಪೋಡಿನಲ್ಲಿ ಸುಂದರ ಹೆಣ್ಣನ್ನು ಬಿಳಿಗಿರಿರಂಗಯ್ಯ ನೋಡುತ್ತಾರೆ. ಅವಳ ಮೇಲೆ ಅವನಿಗೆ ಮನಸ್ಸಾಗುತ್ತದೆ. ಕಾಡು ಸೋಲಿಗರ

[1] *ಸಂಶೋಧಕರು, ಜಾನಪದ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.*

[2] *ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು..*

ಬೋಮ್ಮೆಗೌಡನ ಮಗಳು ಮದುವೆಗೆ ಒಪ್ಪುವುದಿಲ್ಲ. ಮೊದಲೇ ಬಿಳಿಗಿರಿರಂಗಯ್ಯನಿಗೆ ಇಬ್ಬರು ಮಡದಿಯರಿದ್ದಾರೆ. ಜೊತಗೆ ಬಿಳಿಗಿರಿರಂಗಯ್ಯ ಸೋಲಿಗನಲ್ಲ. ಅದ್ದರಿಂದ ಬಿಳಿಗಿರಿರಂಗಯ್ಯ ಹೆಣ್ಣನ್ನು ಕೇಳಿ ಪಡೆಯಲು ಸಾಧ್ಯವಿಲ್ಲವೆಂಬುದನ್ನು ಅರಿತು ಕುಸುಮಾಲೆಯ ಮನಸ್ಸನ್ನು ಕದಿಯುತ್ತಾನೆ. ನಂತರ ಅವಳನ್ನು ಅಪಹರಿಸಿ ಮದುವೆ ಮಾಡಿಕೊಳ್ಳುತ್ತಾನೆ. ಹೀಗೆ ಅಪಹರಣದ ಮೂಲಕ ರಂಗಯ್ಯ ಮತ್ತು ಕುಸುಮಾಲೆ ಪತಿ–ಪತ್ನಿಯರಾಗುತ್ತಾರೆ. ಇದನ್ನು ಒಪ್ಪಿಕೊಂಡ ಸೋಲಿಗ ಸಮುದಾಯದವರು ಬಿಳಿಗಿರಿರಂಗಯ್ಯನನ್ನು ಭಾವನನ್ನಾಗಿ ಸ್ವೀಕರಿಸುತ್ತಾರೆ. ಅಂದಿನಿಂದ ಸೋಲಿಗರಲ್ಲಿ ಅಪಹರಣ ವಿವಾಹ ಪದ್ಧತಿಯು ಬೆಳೆಯಿತು ಎಂದು ಸೋಲಿಗರು ಹೇಳುತ್ತಾರೆ. ಇದರಿಂದ ಕುಸುಮಾಲೆ ಹಾಗೂ ಬಿಳಿಗಿರಿರಂಗಯ್ಯನ ಸಂಬಂಧಗಳ ಜೊತೆ ಜೊತೆಯಲ್ಲಿ ಬೆಸದಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.[3]

ಈಗಾಗಲೇ ದೈವನಾಗಿದ್ದ ಬಿಳಿಗಿರಿರಂಗಯ್ಯ ಸೋಲಿಗರ ಭಾವ ನೆಂಟನಾದ ಮೇಲೆ ಪೂಜಿಸಲೇ ಬೇಕು. ಆದಕಾರಣ ಈ ಭಾಗದ ಸೋಲಿಗರು ಹಾಗೂ ಈ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ದಾಸಯ್ಯರಾಗಿದ್ದರೆ. ಬಿಳಿಗಿರಿರಂಗ ದೇವರಿಗೆ ಸೇರಿದವರು ತಮ್ಮ ಮಕ್ಕಳನ್ನು ದಾಸನನ್ನು ಬಿಡುತ್ತಾರೆ. ಅವನು ದಾಸನಾಗಬೇಕಾದರೆ 12 ರಿಂದ 18 ವರ್ಷಗಳಾಗಿರಲೇಬೇಕು. ದಾಸನನ್ನು ಬಿಡುವ ಸಂದರ್ಭಕ್ಕೆ ಹಳೆಯ ದಾಸಯ್ಯರವರು ಅತನಿಗೆ ಮುಡಿ ಮಾಡಿಸಿ ಆತನಿಗೆ ಹಿರಿಯ ಎಲ್ಲಾ ದಾಸರು ಸೇರಿ ಸ್ನಾನ ಮಾಡಿಸುತ್ತಾರೆ. ನಂತರ ಆತನನ್ನು ಕರೆದುಕೊಂಡು ಒಂದು ಮರದ ಹಸೆಮಣೆ ಮೇಲೆ ಕೂರಿಸಿ, ಮಂಡೆ ಮಾಡಿಸಿ, ಹೊಸ ಬಟ್ಟೆಗಳನ್ನು ತೊಡಿಸಿ, ಅರಿಶಿಣ–ಕುಂಕುಮ ಶ್ರೀಗಂಧವನ್ನು ಇಟ್ಟು ಐದು ಮಹಿಳೆಯರಾದ ಮುತ್ತೈದೆಯರಿಂದ ಅಕ್ಕಿಶಾಸ್ತ್ರ ಮಾಡಿಸಿ ಕಂಕಣ ಧಾರಣೆ ಮಾಡುವರು. ತದನಂತರ ಎಲ್ಲಾ ದಾಸರು ಬಂದು ಪ್ರಮುಖ ಗುರುಗಳ ಮನೆಯಿಂದ ದೊಡ್ಡ ದೇವರನ್ನು ಅಂದರೆ ಹರಿಗೆಯನ್ನು ತಂದು ಅದನ್ನು ರಂಗೋಲಿಯ ಮೇಲೆ ಕುಳ್ಳರಿಸಿ ಬಾಳೆಹಣ್ಣು, ಕಾಯಿ ಒಡೆದು, ಕಡ್ಲೆಪುರಿ ಇರಿಸಿ ಗಂಧದ ಕಡ್ಡಿಯನ್ನು ಹಚ್ಚಿ ಪೂಜಿಸಿ ನಂತರ ದೇವರ ಹೆಸರಿನಲ್ಲಿ ಬಿಟ್ಟಿರುವ ಆಡು(ಮೇಕೆ)ವನ್ನು ಕರೆತಂದು ಅದಕ್ಕೆ ಅರಿಶಿಣ ಕುಂಕುಮ ಇಟ್ಟು ಗಂಧದ ಕಡ್ಡಿಯಿಂದ ಪೂಜೆ ಮಾಡಿ ಅದೇ ಸಮಯಕ್ಕೆ ಒದರಿದ ಅಡು ಅಥವಾ ಕುರಿವನ್ನು ಒಪ್ಪಿಸಿ ಅಡುಗೆ ಮಾಡಿ ರಾತ್ರಿ ಸಮಯದಲ್ಲಿ ಎಲ್ಲಾ ದಾಸರನ್ನು ಕರೆಸಿ ಅವರಿಂದ ದಾಸಯ್ಯನ್ನು ಬಿಡಿಸುತ್ತಾರೆ.

ತಿರುಕುಳ್‌ದಾಸರ ಬಗ್ಗೆ ನೋಡುವುದಾದರೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನಲ್ಲಿಯೂ ಕಾಣಬಹುದು. ಇಂದಿಗೂ ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು ಅಂದರೆ (ಹೊಲೆಯ ಮತ್ತು ಮಾದಿಗರು) ಇಬ್ಬರು ವೈಷ್ಣವ ಲಾಂಛನವೆನಿಸಿದ ಕೆಂಚಣ್ಣ ಕರಿಯಣ್ಣರೆಂಬ ರಾಕ್ಷಸ ರೂಪದ ನಾರಾಯಣನ ಮುಖವಾಡಗಳನ್ನು ಪೂಜಿಸುತ್ತಾ ತಮ್ಮನ್ನು ದಾಸರು ಎಂದು ಕರೆದುಕೊಳ್ಳುವ ಒಂದು ಸಂಪ್ರದಾಯವಿದೆ. ಈ ದಾಸರು ಪ್ರಾಯಶಃ ರಾಮನುಜರ ದೆಸೆಯಿಂದಾಗಿ ವೈಷ್ಣವರಾದ ಸಾವಿರಾರು ಜನ ಹೊಲೆಯರೇ ಕಥಸಾರದ 9ನೇ ಅಧಿಕಾರದಲ್ಲಿ ಉಲ್ಲೇಖವಾಗುತ್ತಿರುವ ತಿರುಕುಳ್‌ದಾಸರು. ಅವರ ಹತ್ತಿರ ಇರುವಂತಹ ಶಂಖ ಜಾಗಟೆ, ನಾಮ, ಮುದ್ರೆ, ಇವುಗಳು ವೈಷ್ಣವ ಲಾಂಛನಗಳಾಗಿವೆ. ಇವುಗಳು ರಾಮಾನುಜರು ಕೊಟ್ಟ ಲಾಂಛನಗಳು ಎಂಬುದು ಸಹ ಕಥಸಾರದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಬಿಳಿಗಿರಿರಂಗನ ಬೆಟ್ಟವನ್ನು ವೈಷ್ಣವೀಕರಿಸಿ ಮೊದಲಿಗೆ ಅಲ್ಲಿ ಪೂಜಾರಿಗಳಾಗಿ

ನೇಮಕಗೊಂಡವರು ತಿರುಕುಳ್‌ದಾಸರೆಂಬ ಹೊಲೆಯರು ಎಂಬುದು ಸಹ ಕಥಾಸಾರದಲ್ಲಿ ಉಲ್ಲೇಖಿತವಾಗಿರುತ್ತದೆ. ಅದರೆ ದಲಿತರು ವೈಷ್ಣವೀಕರಣವಾಗಿ ಹಿಂದೂಗಳಾದರೂ ಸಹ ಆ ಧರ್ಮದಲ್ಲಿ ಸಮಾನತೆ ಸಿಗದೆ ಅಲ್ಲಿಯೂ ಅಸ್ಪೃಶ್ಯರಾಗಿ, ಗುಲಾಮರಾಗಿ, ದಾಸರಾಗಿಯೇ ಉಳಿದು ಕೊಂಡಿರುವುದು ವೈದಿಕ ಮತಾಂತರದ ಚಾರಿತ್ರಿಕ ವ್ಯಂಗ್ಯವಾಗಿದೆ.

ಹೊಲೆ ಮಾದಿಗರ ಹುಟ್ಟು ಶ್ರೇಷ್ಠತೆ ಮತ್ತು ಹೊಲೆಯರು ಹನ್ನೆರಡು ಬಣ್ಣದವರು ಎಂದು ಇಂದಿಗೂ ನಂಬುವ ದಲಿತ ಸಮುದಾಯದ ನಂಬಿಕೆಗಳಿಗೆ ಸಂಬಂಧಿಸಿದಂತೆ ಕುತೂಹಲಕಾರಿ ಚರಿತ್ರೆಯನ್ನು ರಾಜಾವಳಿ ಕಥೆ ಉಲ್ಲೇಖಿಸುತ್ತದೆ.[4] ಮಾದಿಗನು ಭೂಮಿಗೆ ಬಂದುದರಿಂದ ತಾನುಂಡ ಎಂಜಲನ್ನು ಎಲ್ಲರಿಗೂ ಯೋಗ್ಯವೆಂದು ಮಾಡಿದನು. ಅಲ್ಲದೆ ಅತನು ಗಂಗಾಧರನಿಗೆ ಗಜ ಚರ್ಮ ಪಾದುಕೆಗಳನ್ನು ನೀಡಿದ್ದರಿಂದ ಆತನಿಗೆ ಮಾತಂಗನೆಂಬ ಹೆಸರಾಯಿತು. ಭಾಗವತದ ಮಾದಿಗ ವೇಷವನ್ನು ಪುರಾಣದಲ್ಲಿ ಸವಿಸ್ತಾರವಾಗಿ ಹೇಳಿದುದರಿಂದ ತಾನೇ ಹೆಚ್ಚೆಂದು ಹೇಳಿದನು ಎಂಬುದಾಗಿ ಹೊಲೆ–ಮಾದಿಗರ ಕುರಿತು ಕಥಾಸಾರದಿಂದ ತಿಳಿದುಬರುತ್ತದೆ. ಅದೇ ಮಾದರಿಯಲ್ಲಿ ಬಿಳಿಗಿರಿರಂಗನಾಥ ದೇವಾಲಯಕ್ಕೆ ಯಳಂದೂರು ತಾಲೂಕಿನ ಬೂದಿತಿಟ್ಟು ಗ್ರಾಮದ ಮಾದಿಗರು ಪಾದುಕೆಗಳನ್ನು ನೀಡುವ ಸಂಪ್ರದಾಯವಿದೆ.

ದಾಸಯ್ಯರವರು ಈ ಭಾಗದಲ್ಲಿ ಅನುಸೂಚಿತ ಜಾತಿ ಜನಾಂಗದವರ ಸಮುದಾಯದವರಲ್ಲಿ ವಿರಳವಾಗಿ ಇವರು ಕಾಣಿಸಿಗುತ್ತಾರೆ. ಕೊರಳಿನಲ್ಲಿ ಕೆಂಪು ಮಣಿಯನ್ನು ಧರಿಸುತ್ತಾರೆ. ಕೆಲವರು ಬಿಳಿ ವಸ್ತ್ರಗಳನ್ನಷ್ಟೇ ಧರಿಸಿದರೆ, ಮತ್ತೆ ಕೆಲವರು ಹಣೆಗೆ ಬಿಳಿ ಬಣ್ಣದ ಮೂರು ನಾಮ, ಕುಂಕುಮ ಲೇಪನ ಮಾಡಿ ಬಿಳಿ ಪಂಚೆ, ಬಿಳಿ ಅಂಗಿ, ಕೈಯಲ್ಲಿ ಶಂಖ, ಜಾಗಟೆಯನ್ನು ಬಾರಿಸುತ್ತಾ ಶಂಖವನ್ನು ಊದಿ ಮನೆ ಮನೆಗೆ ಹೋಗಿ ಭಿಕ್ಷೆ ಕ್ವಾರಣ್ಯ ಮಾಡುವ ಸಂಪ್ರದಾಯವಿದೆ. ಒಕ್ಕಲಿಗೆ ಸೇರಿದವರು ಇವರನ್ನು ಮದುವೆ ಗೃಹ ಪ್ರವೇಶಗಳಂತಹ ವಿಶೇಷ ಸಂದರ್ಭಗಳಲ್ಲಿ ಆಹ್ವಾನಿಸಿ ಪೂಜೆ–ಪುರಸ್ಕಾರಗಳನ್ನು ಮಾಡಿಸುತ್ತಾರೆ. ಲಿಂಗಧೀರರ ಕುಣಿತದಂತೆ ದಾಸಗುಡ್ಡರಿಂದ ಮಣಿ ಹಾಕಿಸುವ ಪದ್ಧತಿ ದಾಸರಲ್ಲಿ ರೂಢಿಯಲ್ಲಿದೆ. ಮಣೆಹಾಕುವ ಸಂದರ್ಭದಲ್ಲಿ ಮೇಲಿನ ವೇಷಭೂಷಣಗಳೊಂದಿಗೆ ಕೈಯಲ್ಲಿ ತಟ್ಟೆಯಾಕಾರದ ಸಾಮಗ್ರಿ ಮತ್ತು ಗುರಾಣಿಯಂತಹ ಸಾಮಾಗ್ರಿಯನ್ನು ಹಿಡಿದುಕೊಂಡು ಹ್ವಾ.. ಹ್ವೊ.. ಎಂದು ಉದ್ಗರಿಸಿ ಸುತ್ತಲೂ ಸುತ್ತುತ್ತಾರೆ. ಇವರು ದಾಸ ಒಕ್ಕಲಿನವನು ಎಂದೇ ಹೆಸರು ಪಡೆದಿದ್ದಾರೆ.

ಹೊಸ ದಾಸಯ್ಯನನ್ನು ಬಿಟ್ಟ ಮೇಲೆ ಆತನನ್ನು ಹಸೆಮಣೆಯ ಮೇಲೆ ನಿಲ್ಲಿಸಿ, ಅವನ ಕೊರಳಿಗೆ ತುಳಸಿ ಮಾಲೆ ಮತ್ತು ರುದ್ರಾಕ್ಷಿ ಮಾಲೆಯನ್ನು ಹಾಕಿ, ಅವನಿಗೆ ಕಂಜ ಅಂದರೆ ತಾಮ್ರ ಮಿಶ್ರಿತ ಕಂಚಿನ ಗುಂಡಾದ ಪಾತ್ರೆ, ಶಂಖ, ಜಾಗಟೆ ಕೊಟ್ಟು, ಹಣೆಗೆ ಎರಡು ಬಿಳಿನಾಮ, ಮಧ್ಯ ಒಂದು ಕೆಂಪಿನ ನಾಮವನ್ನಿಟ್ಟು ಪಾದ ಪೂಜೆ ಮಾಡಿದರೆ, ಇನ್ನುಳಿದ ದಾಸರುಗಳು ತಮ್ಮ ಲಾಂಛನಗಳಿಂದ ಕುಟ್ಟಿ ಶಬ್ದವನ್ನು ಮಾಡುತ್ತಾರೆ. ಹೊಸ ದಾಸಯ್ಯನ ತಂದೆ ತಾಯಿಗಳು ದೇವರನ್ನು ಪ್ರಾರ್ಥಿಸುತ್ತ ಪಾದ ಪೂಜೆ ಮಾಡಿ ಕಂಜಕ್ಕೆ ಐದು ಕಾಲು ರೂಪಾಯಿ, ಐದು ಪಾವು ಧಾನ್ಯ ಹಾಕಿ ಕಾಲಿಗೆ ಶರಣು ಮಾಡಿಕೊಳ್ಳುವರು. ಈ ರೀತಿಯಲ್ಲಿ ದಾಸಯ್ಯನ ಬಿಡುವ ಕಾರ್ಯಕ್ರಮಗಳು ಸರ್ವೆ ಸಾಮಾನ್ಯವಾಗಿ ನಡೆಯುತ್ತವೆ. ಒಂದು

ವೇಳೆ ಹೊಸ ದಾಸಯ್ಯನು ಮದುವೆಯಾದರೆ ಗಂಡ–ಹೆಂಡತಿ ಇಬ್ಬರೂ ಸಹ ಅವರ ದೇವರಿಗೆ ಸೇರಿದ ಮುದ್ರೆ ಧಾರಣೆ ಮಾಡಿಸಿಕೊಂಡು ಅಲ್ಲಿನ ದಾಸರ ಗುಂಪಿಗೆ ಸೇರಬೇಕಾಗುತ್ತದೆ. ಒಂದು ವೇಳೆ ದಾಸನಿರುವ ಮನೆತನದ ಹುಡುಗಿಯನ್ನು ಮದುವೆವಾದರೆ ಮುದ್ರೆಧಾರಣೆ ಮಾಡಿಸಿ ಕೊಳ್ಳುವ ಅವಶ್ಯಕತೆ ಇರುವುದಿಲ್ಲ.[5]

ಶ್ರಾವಣ ಶನಿವಾರಗಳಲ್ಲಿ ಹಬ್ಬ ಹರಿದಿನಗಳಲ್ಲಿ ಬಿಳಿಗಿರಿರಂಗನ ಒಕ್ಕಲುಗಳಲ್ಲಿ ದೊಡ್ಡ ಹಬ್ಬವಿದ್ದಂತೆ. ಆಗ ದಾಸಪ್ಪಗಳಿಗೆ ಬಿಡುವೇ ಇರುವುದಿಲ್ಲ. ಅಂದು ಒಕ್ಕಲುಗಳು ಮನೆ ಸಾರಿಸಿ ಮೀಸಲು ನೀರಿನಿಂದ ಅಡುಗೆ ಮಾಡುತ್ತಾರೆ. ಹೆಂಗಸರು ಮಾಡಿದ ಅಡುಗೆ ಇಟ್ಟುಕೊಂಡು ದಾಸಪ್ಪನಿಗೆ ಕಾಯುತ್ತಾರೆ. ಒಕ್ಕಲು ಮನೆಗೆ ದಾಸಯ್ಯ ಬಂದು ಪೂಜೆ ಮಾಡಿ ಎಲ್ಲರಿಗೂ ನಾಮ ಇಕ್ಕುತ್ತಾನೆ. ಅವನ ಊಟ ಆದನಂತರ ಮನೆಯವರ ಊಟ ನಡೆಯುತ್ತದೆ. ಮಗು ಹುಟ್ಟುವಾಗ, ಹೆಣ್ಣು ಮಕ್ಕಳು ಪ್ರಥಮ ಬಾರಿಗೆ ಮೈನೆರೆದಾಗ, ಒಕ್ಕಲು ಮನೆಗಳಲ್ಲಿ ಯಾರಾದರೂ ಸತ್ತಾಗ, ಸೂತಕ ಕಳೆಯಲು ದಾಸಪ್ಪ ಬರಲೇಬೇಕು. ಅವನು ಬಂದು ಪೂಜೆ ಮಾಡಿ ತೀರ್ಥ ಸಿಂಪಡಿಸಿದರೆ ಸೂತಕ ಕಳೆಯಿತೆಂದರ್ಥ. ಈ ಭಾಗದಲ್ಲಿ ದಾಸಪ್ಪ ಮುದುಕನಾಗುತ್ತಿದ್ದಾಗಲೇ ತನ್ನ ಮಗನೊಬ್ಬನಿಗೆ ದೀಕ್ಷೆ ಕೊಡಿಸುತ್ತಾನೆ. ದೀಕ್ಷೆಯನ್ನು ಊರಿನಲ್ಲಾದರೂ ಮಾಡಬಹುದು ಅಥವಾ ಬಿಳಿಗಿರಿರಂಗನ ಬೆಟ್ಟದಲ್ಲಾದರೂ ಮಾಡಬಹುದು. ದೀಕ್ಷೆ ತೆಗೆದುಕೊಂಡ ನಂತರ ಬೇರೆಯವರ ಎಂಜಲು ತಿನ್ನಬಾರದು, ಕಂಚಿನ ಗಂಗಾಳದಲ್ಲಿ ಊಟ ಮಾಡಬಾರದು, ಭಿಕ್ಷಾಟನೆ ತನ್ನ ವೃತ್ತಿಯೆಂದು ತಿಳಿದುಕೊಳ್ಳಬೇಕು. ಏಕೆಂದರೆ ಅವನು ದೇವರ ಪ್ರತಿನಿಧಿ ತಾನೇ. ದಾಸಪ್ಪ ಸತ್ತಾಗ 11 ದಿನ ಸೂತಕ ಆಚರಿಸುತ್ತಾರೆ. ಆತನ ಸಮಾಧಿಯ ಗುರುತುಗಾಗಿ ಒಂದು ಕಲ್ಲು ನೆಟ್ಟು ಮೂರು ನಾಮ ಬಳಿಯುತ್ತಾರೆ. ಬಿಳಿಗಿರಿರಂಗನ ಒಕ್ಕಲಿನ ದಾಸಯ್ಯನವರು ತಿರುಪತಿಗೂ ಹೋಗುತ್ತಾರೆ.

ದಾಸಯ್ಯನವರು ಬಿಳಿಗಿರಿರಂಗನ ಬೆಟ್ಟದಲ್ಲಿಯೂ ಗೋವಿಂದಾ ಗೋವಿಂದಾ ಎನ್ನುತ್ತಾರೆ.[6] ಬಿಳಿಗಿರಿರಂಗನ ಬೆಟ್ಟದ ಪರಿಸರದಲ್ಲಿ ಸುಮಾರು ಊರಿನವರ ಮರಗಳಿವೆ. ಇದಕ್ಕೆ ತಂಗುದಾಣ ಎಂದು ಕರೆಯುವ ವಾಡಿಕೆ ಇದೆ. ಶ್ರೀ ಬಿಳಿಗಿರಿರಂಗನಾಥ ಸ್ವಾಮಿಗೆ ಬಿಳಿಕಲ್ಲು, ತಿರುವೆಂಕಟನಾಥನೆಂದು ಮತ್ತೊಂದು ಹೆಸರಿದ್ದು ಈ ಸ್ವಾಮಿಗೆ ಹದಿನಾಡಿನ ಮುದ್ದುರಾಜನು 1667ರಲ್ಲಿ ಹಾಗೂ ದಿವಾನ್ ಪೂರ್ಣಯ್ಯನವರು ದೇವಾಲಯದ ಸೇವೆಗಾಗಿ ಎರಡು ಗ್ರಾಮಗಳನ್ನು ದತ್ತಿ ಬಿಟ್ಟಿರುವುದಾಗಿ ತಿಳಿದುಬರುತ್ತದೆ. ಸ್ಥಳೀಯರ ಪ್ರಕಾರ ಅಲ್ಲದೆ ಜಾನಪದ ಕಥೆಯ ಪ್ರಕಾರ ಶ್ರೀ ರಂಗನಾಥಸ್ವಾಮಿಯು ಕಾಡಿನ ಸೋಲಿಗ ಜನಾಂಗದ ಕನ್ಯೆಯಾದ ಕುಸುಮ ಬಾಲೆಯನ್ನು ವರಿಸಿದ ಕಾರಣ ಇಲ್ಲಿನ ಸೋಲಿಗ ಜನಾಂಗದವರು ಈಗಲೂ ಶ್ರೀಸ್ವಾಮಿಯನ್ನು ಭಾವನೆಂದು ಕರೆಯುವ ಪದ್ಧತಿ ಇದೆ.

ಜನವರಿ ಮಾಹೆಯಲ್ಲಿ ಸಂಕ್ರಾಂತಿ ಹಬ್ಬದ ಮಾರನೇ ದಿನ ಚಿಕ್ಕ ಜಾತ್ರೆಯು ಅಲ್ಲದೆ ಏಪ್ರಿಲ್ ಕೊನೆಯ ವಾರದಲ್ಲಿ ಅಥವಾ ಮೇ ಮೊದಲ ವಾರದಲ್ಲಿ ಬರುವ ಚಿತ್ತಾ ನಕ್ಷತ್ರದ ದಿನ ದೊಡ್ಡ ಜಾತ್ರೆಯು (ಬ್ರಹ್ಮ ರಥೋತ್ಸವ) ನಡೆಯುತ್ತದೆ. ಇದರ ಪ್ರಯುಕ್ತ 9 ದಿನ ವೈಖಾನಸಾಗಮ ಪದ್ಧತಿ ಪ್ರಕಾರ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ. ಈ ಪ್ರದೇಶದಲ್ಲಿ ಗರುಡ ಪಕ್ಷಿಯು ಸಾಮಾನ್ಯವಾಗಿ ಕಾಣಿಸುವುದಿಲ್ಲ. ಆದರೆ ರಥೋತ್ಸವದ ದಿನ ರಥವು ಸಜ್ಜಾಗಿ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಿ ಮಂಗಳಾರತಿ

ಮಾಡಿದಾಗ ಗರುಡ ಪಕ್ಷಿಯು ಎಲ್ಲಿಂದಲ್ಲೋ ಬಂದು ರಥದ ಮೇಲೆ ಆಕಾಶದಲ್ಲಿ ಮೂರು ಪ್ರದಕ್ಷಿಣೆ ಹಾಕಿ ಬಂದಂತೆಯೇ ಮಾಯವಾಗುತ್ತದೆ. ಅದರ ನಂತರವೇ ರಥವು ಹೊರಡುತ್ತದೆ. ಇದು ಆದಿಕಾಲದಿಂದಲೂ ನಡೆದು ಬಂದ ಸಂಗತಿಯಾಗಿರುತ್ತದೆ. ಆದರೆ ವಿಶೇಷವಾಗಿ ಇಲ್ಲಿ ಪ್ರತಿಯೊಂದು ಕಾರ್ಯದಲ್ಲಿಯೂ ದಾಸಯ್ಯನವರ ಸಾಂಸ್ಕೃತಿಕ ಹಿನ್ನಲೆ ಮಹತ್ವದಾಗಿದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ದಾಸ ಪರಂಪರೆಯು ವೈಷ್ಣವ ಧರ್ಮದ ಆಚರಣಾ ಪದ್ಧತಿಯಾಗಿದ್ದು, ರಾಮನುಜಚಾರ್ಯರ ಪ್ರಭಾವದಿಂದ ಬುಡಕಟ್ಟು ಮತ್ತು ಹಿಂದುಳಿದ ಜಾತಿಗಳು ಬಿಳಿಗಿರಿರಂಗನಾಥ ಸ್ವಾಮಿ ಒಕ್ಕಲಿಗೆ ಸೇರಿಕೊಂಡು ದಾಸಯ್ಯ ಪರಂಪರೆಯನ್ನು ಅನುಸರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಚಾಮರಾಜನಗರ ಜಿಲ್ಲೆಯ ಬಹುಭಾಗಗಳಲ್ಲಿ ಯಾವುದೇ ಹಬ್ಬ ಹರಿದಿನ ಅಥವಾ ಆಚರಣೆ ನಡೆದರೂ ಕೂಡ ಅಲ್ಲಿ ದಾಸಯ್ಯನ ಪಾತ್ರ ಮಹತ್ವವಾದುದಾಗಿದೆ.

**ಕೊನೆ ಟಿಪ್ಪಣಿಗಳು**


1. ನಾಗಣ್ಣ.ಸಿ.(ಸಂ). ಮಾನವಿಕ ಕರ್ನಾಟಕ. ಪ್ರಸಾರಂಗ, ಮೈಸೂರು ವಿ.ವಿ., ಮೈಸೂರು.
2. ರಮೇಶ್.ಸ.ಚಿ. (2005). ಜಾನಪದ ಕರ್ನಾಟಕ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಪು.ಸಂ.82–83.
3. ಸುನಂದಮ್ಮ. ಎನ್. (2011). ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ದಿಗೆ ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳು ಒಂದು ವಿಮರ್ಶಾತ್ಮಕ ಅಧ್ಯಯನ, ಅಭಿರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು. ಪು.ಸಂ. 86–87.
4. ಸಣ್ಣಯ್ಯ. ಬಿ.ಎಸ್. (1988). ದೇವಿಚಂದ್ರ ವಿರಚಿತ ರಾಜಾವಳಿ ಕಥಾಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
5. ನಂಜಯ್ಯ.ಎಂ. (2002). ಹೊಂಗನೂರು, ಜಾನಪದ ಸಿರಿ, ಪ್ರಸನ್ನ ಪ್ರಕಾಶನ ಹೊಂಗನೂರು, ಚಾಮರಾಜನಗರ. ಪು.ಸಂ.3–7.
6. ರಮೇಶ್. ಸ.ಚಿ. (2005). ಪೂರ್ವೋಕ್ತ., ಪು.ಸಂ.82–86.